ಆ) ದಾಂಡೇ ಜಲವಿದ್ಯುತ್ ಯೋಜನೆಗೆ (ಘಟಕ ಸಾಮರ್ಥ್ಯ 2,30-0 ಮೆ.ವ್ಯಾ. ವಾರ್ಷಿಕ ವಿದ್ಯುತ್ ಉತ್ಪಾದನೆ 212 ದಶಲಕ್ಷ ಯೂನಿಟ್‌ಗಳು) ಅರಣ್ಯ ಇಲಾಖೆಯಿಂದ ಅರಣ್ಯ ಪ್ರದೇಶವನ್ನು ಯೋಜನೆಗಾಗಿ ಬಿಡುಗಡೆ ಮಾಡಿದ ನಂತರ ಈ ಯೋಜನೆಯ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸಲಾಗುವುದು.

ಇ) ಇದಲ್ಲದೇ (ಘಟಕ ಸಾಮರ್ಥ್ಯ 4,200-800 ಮೆ.ವ್ಯಾ. ವಾರ್ಷಿಕ ವಿದ್ಯುತ್ ಉತ್ಪಾದನೆ 1711 ದಶಲಕ್ಷ ಯೂನಿಟ್‌ಗಳು) ಮತ್ತು ಬೆಣ್ಣೆಹೊಳೆ (ಘಟಕ ಸಾಮರ್ಥ್ಯ 1,50-50 ಮೆ.ವ್ಯಾ ವಾರ್ಷಿಕ ವಿದ್ಯುತ್ ಉತ್ಪಾದನೆ 210 ದಶಲಕ್ಷ ಯೂನಿಟ್‌ಗಳು) ಜಲವಿದ್ಯುತ್ ಯೋಜನೆಗಳ ಅನ್ವೇಷಣಾ ಪ್ರಗತಿಯಲ್ಲಿದ್ದು ವಿವಿಧ ಹಂತದಲ್ಲಿದೆ.

ವಿಷಯ: ರಾಜ್ಯದಲ್ಲಿ ಮೀನುಗಾರಿಕೆ ಅಭಿವೃದ್ಧಿ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ.177(350)

ಶ್ರೀ. ವಿಶ್ವೇಶ್ವರಾ ಹೆಗ್ಗಡೆ (ಅಂಕೋಲಾ)

ಮಾನ್ಯ, ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು.

ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯದಲ್ಲಿ ಮೀನುಗಾರಿಕಾ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಕೆ. ಜಯಪ್ರಕಾಶ್

ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು.

1. ಇಲಾಖೆಯ ಮೀನುಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳಲ್ಲಿ 15.76 ಕೋಟಿ ಪ್ಯೆ ಮೀನುಮರಿಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.

2. 18 ಜಲಾಶಯಗಳಲ್ಲಿ 106 ಲಕ್ಷ ಮೀನುಮರಿ ಬಿತ್ತನೆ ಮಾಡಿ ಅಭಿವೃದ್ಧಿಪಡಿಸಲಾಗಿದೆ.

3. ಖಾಸಗಿ ವಲಯದಲ್ಲಿ ಮೀನುಮರಿ ಉತ್ಪಾದನೆ ಮತ್ತು ಪಾಲನೆಯನ್ನು ಪ್ರೋತ್ಸಾಹಿಸಲು 33 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

4. ರೂ. 473.88 ಲಕ್ಷ ರೂ.ಗಳ ವೆಚ್ಚದಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ನೆರವಿನ ಜಲಾಶಯ ಮೀನುಗಾರಿಕೆ- ಅಭಿವೃದ್ಧಿ ಯೋಜನೆಯನ್ನು ಮೈಸೂರು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

5. ಖಾಸಗಿ ವಲಯದಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು 1 ಎಕರೆ ವಿಸ್ತೀರ್ಣದ ಕೊಳಗಳ ನಿರ್ಮಾಣಕ್ಕೆ ತಲಾ 10,000-00 ರೂ.ಗಳ ಸಹಾಯಧನ ನೀಡಲಾಗುತ್ತಿದೆ.

6. ನೀರಾವರೀ ಪ್ರದೇಶಗಳಲ್ಲಿ ಜೌಗು ಮತ್ತು ಚೌಳು ಪ್ರದೇಶದಲ್ಲಿ 1 ಎಕರೆ ವಿಸ್ತೀರ್ಣದ ಮೀನು ಕೊಳಗಳ ನಿರ್ಮಾಣಕ್ಕೆ ಮತ್ತು ಮೀನು ಸಾಕಾಣಿಕೆ ತಲಾ ರೂ. 30,000-00ರೂ.ಗಳಿನ

ಚೌಗು ಮತ್ತು ಚೌಳು ಪ್ರದೇಶದಲ್ಲಿ 1 ಎಕರೆ ವಿಸ್ತೀರ್ಣದ ಮಿನು ಕೊಳಗಳ ನಿರ್ಮಾಣಕ್ಕೆ ಮತ್ತು ಮಿನು ಸಾಕಾಣಿಕೆಗೆ ತಲಾ ರೂ. 30,000-00 ರೂ.ಗಳ ಸಹಾಯಧನ ನೀಡಲಾಗುವುದು.

7. ಸಣ್ಣ ಕೆರೆಗಳ ಅಭಿವೃದ್ಧಿಗೆ 12 ಜಿಲ್ಲೆಗಳಲ್ಲಿ ಮಿನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

8) ಮಿನು ಮಾರಾಟಕ್ಕೆ ನಿರ್ಮಿಸಲು ತಲಾ 50,000-00ರೂ.ಗಳ ಸಾಲ ಮತ್ತು ಸಹಾಯಧನ ನೀಡಲಾಗುತ್ತಿದ್ದು, ಇದುವರೆವಿಗೆ 66 ಮಿನು ಮಾರುಕಟ್ಟೆ ನಿರ್ಮಿಸಲಾಗಿದೆ.

9) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕ್ರಮವಾಗಿ ಶೇ. 60 ಮತ್ತು ಶೇ. 100ರಷ್ಟು ಸಹಾಯಧನವನ್ನು ಮಿನುಮರಿ ಮತ್ತು ಸಲಕರಣೆ ಖರೀದಿಗೆ ನೀಡಲಾಗುತ್ತಿದೆ.

10) ಕರಾವಳಿ ಜಿಲ್ಲೆಯಲ್ಲಿ ಉಪ್ಪು ನೀರು ಪ್ರದೇಶವನ್ನು ಸೀಗಡಿ ಕೃಷಿಗೆ ಅಳವಡಿಸಲು ಎರಡು ಕರಾವಳಿ ಜಿಲ್ಲೆಗಳಲ್ಲಿಯೂ ಕೇಂದ್ರ ನೆರವಿನೊಂದಿಗೆ ಸೀಗಡಿ ಕೃಷಿ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

11) ಮಿನುಗಾರಿಕೆ ದೋಣಿಗಳ ಉಪಯೋಗಕ್ಕೆ ಬಂದರುಗಳು ಮತ್ತು ಜಟ್ಟಿಗಳನ್ನು ನಿರ್ಮಾಣ ಮಾಡಿ ನಿರ್ವಹಿಸಲಾಗುತ್ತಿದೆ.

12) ದೂರ ಸಂವೇದಿ ಉಪಗ್ರಹದ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಮಿನು ಸಿಗುವ ಸ್ಥಳವನ್ನು ಗುರುತಿಸಿ ಮಾಹಿತಿಯನ್ನು ಮಿನುಗಾರರಿಗೆ ಒದಗಿಸಲಾಗುತ್ತಿದೆ.

13) ದೂರ ತೀರದ ದೋಣಿಗಳಿಗೆ ರೇಡಿಯೋ ಟೆಲಿಫೋನ್ ಜಿ 'ಪಿ' ನ್ಯಾವಿಗೇಟರ್, ಫಿಶ್ ಫೈಂಡರುಗಳನ್ನು ಅಳವಡಿಸಲು ಗರಿಷ್ಟ 50,000-00 ಗಳವರೆಗೆ ಸಹಾಯಧನ ನೀಡ ಲಾಗುತ್ತಿದೆ.

14) ಮಿನುಗಾರಿಕೆ ನಾಡದೋಣಿಗಳನ್ನು ತಾಂತ್ರೀಕರಣಗೊಳಿಸಲು ಪ್ರತಿ ದೋಣಿಗೆ 10,000-00ರೂ.ಗಳ ಸಹಾಯಧನ ನೀಡಲಾಗುತ್ತಿದೆ.

15) ಯಾಂತ್ರೀಕೃತ ಮಿನುಗಾರಿಕೆ ದೋಣಿಗಳು ಉಪಯೋಗಿಸುವ ಇಂಧನಕ್ಕೆ ಅಬಕಾರಿ ಶುಲ್ಕ ರಿಯಾಯಿತಿಯನ್ನು ನೀಡಲಾಗುತ್ತಿದೆ.

16) ಮಲ್ಪೆ, ಮಂಗಳೂರು, ಕಾರವಾರ ಮತ್ತು ಹೊನ್ನಾವರಗಳಲ್ಲಿ ಮಿನುಗಾರಿಕ ಬಂದರು ಗಳನ್ನು ಸ್ಥಾಪಿಸಲಾಗಿದೆ.

17) ಭಾರತ-ಡೆನ್ಮಾರ್ಕ್ ಯೋಜನೆಯಡಿಯಲ್ಲಿ 250 ಮಿಾಟರ್ ಧಕ್ಕೆ ಹರಾಜು, ಪ್ರಾಂಗಣ, ಮಂಜುಗಡ್ಡೆ ಸ್ಥಾವರ, ಶೀತಲೀಗೃಹ ಗೇರೆಪಡ್ ಮುಂತಾದನ್ನು ನಿರ್ಮಿಸಲಾಗಿದೆ.

18) ಕರಾವಳಿ ಜಿಲ್ಲೆಗಳಲ್ಲಿ 164 ಕಿ.ಮಿಾ. ಮಿನುಗಾರಿಕೆ ಕೊಂಡಿರಸ್ತೆಗಳನ್ನು ನಿರ್ಮಿಸಿ ನಿರ್ವಹಿಸಲಾಗುತ್ತಿದೆ.